# ಯಕ್ಷರಂಗದ ವರಪ್ರಸಾದ

ತೆಂಕುತಿಟ್ಟು ಯಕ್ಷಗಾನದ ಪಾರಂಪರಿಕ ಭಾಗವತಿಕೆಯ ಪ್ರಾತಿನಿಧಿಕ ಮಾದರಿ 'ಬಲಿಪ ಶೈಲಿ'. ಯಕ್ಷಗಾನ ಭಾಗವತಿಕೆಯಲ್ಲಿ ಸಾಹಿತ್ಯ ಸ್ಪಷ್ಟತೆ, ರಾಗ ತಾಳಗಳ ನಿಘಂಟು, ಮಟ್ಟುಗಳ ಖಾಚಿತ್ಯ ಹಾಗೂ ಏರುಸ್ಥಾಯಿಯ ಹಾಡುಗಾರಿಕೆಗೆ ಬಲಿಪ ಶೈಲಿಯು ಹೆಸರುವಾಸಿ. ಇಂತಹ ಪಾರಂಪರಿಕ ಭಾಗವತರ ಮನೆತನದಲ್ಲಿ ಜನಿಸಿದರು. ಎಳೆ ವಯಸ್ಸಿನಲ್ಲೇ ಯಕ್ಷರಸಿಕರ ಮನಸೂರೆಗೊಂಡವರು ಬಲಿಪ ಪ್ರಸಾದ್ ಭಟ್.

1976 ರ ಏಪ್ರಿಲ್ 14ರಂದು ಮೂಡಬಿದಿರೆಯ ಬಳಿಯ ಮಾರೂರಿನ ನೂಯಿ ಎಂಬಲ್ಲಿ ಬಲಿಪ ನಾರಾಯಣ ಭಾಗವತ ಹಾಗೂ ಜಯಲಕ್ಷ್ಮಿ ದಂಪತಿಗಳ ತೃತೀಯ ಮಗನಾಗಿ ಜನಿಸಿ, ತನ್ನ ಹದಿನೇಳನೇ ವಯಸ್ಸಿನಲ್ಲಿ ಕಟೀಲು ಶ್ರೀ ದುರ್ಗಾಪರಮೇಶ್ವರಿ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿಯಲ್ಲಿ ಭಾಗವತರಾಗಿ ಕಾರ್ಯನಿರ್ವಹಿಸಿದರು. ಕಟೀಲು ಮೇಳದಲ್ಲಿಯೇ ಸುಮಾರು 25 ವರ್ಷಗಳ ವೃತ್ತಿ ನಿರತ ಅನುಭವ ಬಲಿಪ ಪ್ರಸಾದರದ್ದು.

ಯಕ್ಷಗಾನದ ಪೂರ್ವರಂಗದಿಂದ ತೊಡಗಿ ಎಲ್ಲಾ ಪ್ರಸಂಗಗಳ ನಡೆಯನ್ನೂ ನಿಖರವಾಗಿ ತಮ್ಮ ತಂದೆಯೂ ತೆಂಕುತಿಟ್ಟಿನ ಭಾಗವತ ಕುಲಪತಿಗಳೆನಿಸಿದ ಬಲಿಪ ನಾರಾಯಣ ಭಾಗವತರಿಂದ ಪ್ರಾಯೋಗಿಕವಾಗಿಯೇ ಕಲಿತವರು. ಇವರು ಹಲವು ಪ್ರಸಂಗಗಳನ್ನು ಕಂಠಸ್ಥವಾಗಿ ಹೇಳುವುದರಲ್ಲಿ ನಿಪುಣರಾಗಿದ್ದರು.

ಬಲಿಪ ಪ್ರಸಾದರು ಯಕ್ಷಗಾನದ ಭಾಗವತಿಕೆಯ ಸಮಗ್ರ ಮಾಹಿತಿಯುಳ್ಳ ಯುವ ಭಾಗವತರಾಗಿದ್ದರು. ಅನೇಕ ಯಕ್ಷಗಾನ ಕಮ್ಮಟಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ತೆಂಕುತಿಟ್ಟಿನ ಯಕ್ಷಗಾನದ ಪೂರ್ವರಂಗವನ್ನು ಪ್ರದರ್ಶಿಸಿ ಜನಮೆಚ್ಚುಗೆ ಗಳಿಸಿದ್ದರು.

ತಾಳ ಲಯಗಳ ಸಿದ್ಧಿಯಿದ್ದ ಯುವ ಭಾಗವತರಾಗಿದ್ದ ಅವರು ಯಕ್ಷಗಾನ ಸಾಹಿತ್ಯದಲ್ಲಿ ಛಂದಸ್ಸಿನ ಅರ್ಧ ಮಾತ್ರೆಯ ವ್ಯತ್ಯಾಸವನ್ನೂ ಸೂಕ್ಷ್ಮವಾಗಿ ಗ್ರಹಿಸುವಲ್ಲಿ ನಿಷ್ಣಾತರಾಗಿದ್ದರು. ಪರಂಪರೆಯ 'ಬತ್ತೀಸ್ ರಾಗ'ಗಳನ್ನೂ ಕಾಲೋಚಿತವಾಗಿ ಬಳಸಿ ಯಕ್ಷಗಾನ ಬಯಲಾಟವನ್ನು ಕಳೆಗಟ್ಟಿಸುವ ಚಮತ್ಕೃತಿಯನ್ನು ಕರಗತಮಾಡಿಕೊಂಡ ಅಪೂರ್ವ ಕಲಾವಿದರಾಗಿದ್ದರು.

ಪರಂಪರೆಯ ಸೊಗಡನ್ನು ಒಂದಿಷ್ಟೂ ಬಿಡದೆ ಹೊಸತನವನ್ನೂ ಮೈಗೂಡಿಸಿಕೊಂಡ ಇವರು ಯುವಜನರನ್ನು ಯಕ್ಷಗಾನದೆಡೆಗೆ ಆಕರ್ಷಿಸಿ ಅನೇಕ ಅಭಿಮಾನಿಗಳ ನೆಚ್ಚಿನ ಭಾಗವತರಾಗಿ ಹೆಸರುವಾಸಿಯಾಗಿದ್ದರು. ಅಪ್ಪನ ದಾರಿಯನ್ನು



**ತೆಂಕುತಿಟ್ಟು ಯಕ್ಷಗಾನ ಭಾಗವತಿಕೆಯಲ್ಲಿ ಖ್ಯಾತರಾಗಿದ್ದ, ಪರಂಪರೆಯ ಹಾಡುಗಾರಿಕೆಯಲ್ಲಿ ಅತ್ಯಂತ ಜನಪ್ರಿಯರಾಗಿದ್ದ ಕಂಚಿನ ಕಂಠದ ಬಲಿಪ ಪ್ರಸಾದ ಭಾಗವತರ ಅಗಲಿಕೆ ಯಕ್ಷಲೋಕಕ್ಕಾದ ಅಪಾರ ನಷ್ಟ.**

**■ ಕಜೆ ಸುಬ್ರಹ್ಮಣ್ಯ ಭಟ್**

ಆದರ್ಶವಾಗಿಸಿ, ಗಟ್ಟಿಯಾಗಿ ಹಿಡಿದುಕೊಂಡು ಮುನ್ನಡೆದ ಪ್ರಸಾದರು ಅವರದ್ದೇ ಆದ ಸ್ವಂತಿಕೆಯ ಮೂಲಕ ಯಕ್ಷರಸಿಕರ ಮನತಣಿಸಿದವರು. ರಂಗ ನಿರ್ದೇಶನ, ಪ್ರಸಂಗ ನಿರ್ಣಯ, ಪ್ರಯೋಗ ತಂತ್ರಗಳಲ್ಲಿ ಪರಿಪೂರ್ಣತೆಯನ್ನು ಸಾಧಸಿದ್ದ ಪ್ರಸಾದರು ಸಮಕಾಲೀನ ಯುವಭಾಗವತರಿಗೆ ಮಾದರಿಯಾಗಿದ್ದರು.

## ಆತ್ಮೀಯ ಸ್ನೇಹಿತ

ಇದು ಕೆಲವರ್ಷಗಳ ಹಿಂದಿನ ಮಾತು. ಪ್ರಸಾದರು ಆಗಷ್ಟೇ ಸಣ್ಣ ಅಪಘಾತದಿಂದ ಮೈ ಕೈಗೆ ಗಾಯಗಳಾಗಿ ವಿಶ್ರಾಂತಿಯಲ್ಲಿದ್ದರು. ಅವರ ಭಾಗವತಿಕೆಯ ತುಣುಕುಗಳನ್ನು ದಾಖಲೀಕರಣ ಮಾಡುವ ಯೋಜನೆ ಹಾಕಿಕೊಂಡಿದ್ದ ನಾನು ಅವರ ಮನೆಗೆ ಹೋಗಿದ್ದೆ. 'ಕೆಲವು ಪದ್ಯಗಳ ದಾಖಲೀಕರಣ ಮಾಡೋಣ ಅಂದುಕೊಂಡಿದ್ದೇನೆ. ಮನೆಗೆ ಬರಬಹುದಾ' ಎಂದು ವಿನಂತಿಸಿದ್ದೆ. ತನಗೆಷ್ಟೇ ನೋವಿದ್ದರೂ ಕೂಡಲೇ ಒಪ್ಪಿ ಬಂದದ್ದಲ್ಲದೆ ಉತ್ತಮವಾಗಿ ಹಾಡಿ ದಾಖಲೀಕರಣ ಯಶಸ್ಸುಗೊಳಿಸಿದ ಆತ್ಮೀಯ ಸ್ನೇಹಿತ ನಮ್ಮ ಪ್ರಸಾದಣ್ಣ. ಬೇರೆ ಯಾರೇ ಆದರೂ ಅಂತಹ ಸ್ಥಿತಿಯಲ್ಲಿ ಬರುತ್ತಲೇ ಇರಲಿಲ್ಲ. ನನ್ನ ಮೇಲಿನ ಪ್ರೀತಿ ಹಾಗೂ ವೃತ್ತಿ ಮೇಲಿನ ಬದ್ಧತೆ ಅವರನ್ನು ಹಾಡುವಂತೆ ಮಾಡಿತ್ತು.

ವೇಣೂರು ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಸಂಘದ ಎಲ್ಲಾ ತಾಳಮದ್ದಳೆ ಕಾರ್ಯಕ್ರಮಗಳಲ್ಲಿ ಅತಿಥಿ ಭಾಗವತರಾಗಿ ಭಾಗವಹಿಸಿ ಕಾರ್ಯಕ್ರಮವನ್ನು ಕಳೆಯೇರಿಸುತ್ತಿದ್ದರು. ವಿವಿಧ ಕಾರ್ಯಕ್ರಮಗಳಲ್ಲದೇ ಆಕಾಶವಾಣಿಯಲ್ಲಿ ನಮ್ಮ ತಂಡವು ನಡೆಸಿಕೊಟ್ಟ ಯಕ್ಷಗಾನ ತಾಳಮದ್ದಳೆಗಳಾದ 'ಗರುಡ ಗರ್ವಭಂಗ', 'ವೀರವರ್ಮ ಕಾಳಗ', 'ಶಲ್ಯಾವಸಾನ'ವೇ ಮೊದಲಾದ ತಾಳಮದ್ದಳೆಗಳಲ್ಲಿ ಭಾಗವತರಾಗಿ ಪಾಲ್ಗೊಂಡು ಕೇಳುಗರ ಮನಸೂರೆಗೊಂಡಿದ್ದರು.

ಯಾವುದೇ ಪೌರಾಣಿಕ ಪ್ರಸಂಗವನ್ನು ಆಡಿಸುವ ಕೌಶಲ್ಯ ಪ್ರಸಾದರಲ್ಲಿತ್ತು. ಪಾರ್ತಿಸುಬ್ಬನ ಪ್ರಸಂಗಗಳು, ಮುದ್ದಣನ ಪ್ರಸಂಗಗಳಾದ ಕುಮಾರ ವಿಜಯ, ರತ್ನಾವತಿ ಕಲ್ಯಾಣ ಅವರಿಗೆ ಬಲು ಪ್ರಿಯವಾದ ಪ್ರಸಂಗಗಳಾಗಿದ್ದವು. ದುಶ್ಯಾಸನ ವಧೆ, ಕಿರಾತಾರ್ಜುನ, ಮೈರಾವಣ ಕಾಳಗದಂತಹ ಪರಂಪರೆಯ ಕ್ರಮದ ಪ್ರಸಂಗಗಳಲ್ಲಿ ಅವರು ವಿಜೃಂಭಿಸುತ್ತಿದ್ದ ರೀತಿ ಪ್ರೇಕ್ಷಕರಿಗೆ ರಸದೌತಣವಾಗಿರುತ್ತಿತ್ತು.

ಹಲವಾರು ಧ್ವನಿಸುರುಳಿಗಳಿಗೆ ಧ್ವನಿಯಾದ ಪ್ರಸಾದರು ಅನೇಕ ಯಕ್ಷಗಾನ ವಿಡಿಯೊ ಚಿತ್ರೀಕರಣದಲ್ಲಿ ಭಾಗವಹಿಸಿದ್ದಾರೆ. ಮುಂಬಯಿ, ಚೆನ್ನೈ ಮುಂತಾದ ಮಹಾನಗರಗಳಲ್ಲಿ ಮತ್ತು ಬಹರೈನ್ ಮೊದಲಾದ ವಿದೇಶಗಳಲ್ಲೂ ತಮ್ಮ ಭಾಗವತಿಕೆಯ ಕಂಪನ್ನು ಪಸರಿಸಿದ್ದರು.

ಅನೇಕ ಸಮ್ಮಾನಗಳು, ಪ್ರಶಸ್ತಿಗಳು ಅವರ ಮುಡಿಯನ್ನಲಂಕರಿಸಿದೆ. ಕಟೀಲು ಅಸ್ರಣ್ಣ ಪ್ರಶಸ್ತಿ, ಬೊಂಡಾಲ ಪ್ರಶಸ್ತಿ ಅವುಗಳಲ್ಲಿ ಕೆಲವು.

'ಯಕ್ಷರಂಗದ ವರಪ್ರಸಾದ' ಎಂಬ ಬಿರುದಿಗೆ ಕಿರಿವಯಸ್ಸಿನಲ್ಲೇ ಪಾತ್ರರಾದ ಹೆಗ್ಗಳಿಕೆ ಅವರದು. ಇಂತಹ ಅಪೂರ್ವ ಯುವ ಕಲಾವಿದರಾದ ಅವರು ಕೀರ್ತಿಯ ಉತ್ತುಂಗವೇರಿ ಮೆರೆಯುತ್ತಿರುವಾಗಲೇ ಕ್ಯಾನ್ಸರ್ ಮಹಾಮಾರಿಯೆಂಬ ವಿಧಿಯಾಟಕ್ಕೆ ಬಲಿಯಾಗಿ ಲಕ್ಷಾಂತರ ಮಂದಿ ಯಕ್ಷಗಾನ ಪ್ರಿಯರನ್ನಗಲಿ (ನಿಧನ: ಏ. 11ರಂದು) ಬಾರದಲೋಕವನ್ನು ಸೇರಿಕೊಂಡಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in